**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1500 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 18.12.2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪೊಲೀಸ್ ಇಲಾಖೆಯಲ್ಲಿ ನಿಗದಿಪಡಿಸಿರುವ ಕರ್ತವ್ಯದ ಸಮಯವೆಷ್ಟು; ಬೇರೆ ಇಲಾಖೆಗಳಲ್ಲಿನ ಕರ್ತವ್ಯದ ಸಮಯಕ್ಕೂ ಈ ಇಲಾಖೆಯ ಕರ್ತವ್ಯದ ಸಮಯಕ್ಕೂ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕಿದೆಯೇ; ಹಾಗಿದ್ದಲ್ಲಿ, ಈ ವ್ಯತ್ಯಾಸವನ್ನು ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಪೊಲೀಸ್ ಮ್ಯಾನ್ಯುಯಲ್‌ನ ಆದೇಶದನ್ವಯ ಸಿಬ್ಬಂದಿಗಳಿಗೆ 08 ಗಂಟೆಗಳ 03 ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗುತ್ತದೆ. ಠಾಣೆಗಳ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ನಿರ್ವಹಣೆ, ಬಂದೋಬಸ್ತ್ ಕರ್ತವ್ಯ ಇತ್ಯಾದಿ ಕರ್ತವ್ಯದ ಒತ್ತಡದ ಕೆಲವು ಸಂದರ್ಭಗಳಲ್ಲಿ ಆಯಾ ಠಾಣಾಧಿಕಾರಿಗಳು ಅವಶ್ಯಕತೆಗನುಗುಣವಾಗಿ ಸಿಬ್ಬಂದಿಗಳನ್ನು ಸೀಮಿತ ಅವಧಿಗೆ 02 ಪಾಳಿಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಿರುತ್ತಾರೆ.<br><br>ಪೊಲೀಸ್ ಇಲಾಖೆಯು 'ಅತ್ಯಗತ್ಯ ಸೇವೆ'ಯ ವರ್ಗಕ್ಕೆ ಸೇರಿದ್ದು, ಪೊಲೀಸ್ ಕಾಯ್ದೆ, 1963 ರ ಕಲಂ 21 ರನ್ವಯ ರಜೆ ಅಥವಾ ಅಮಾನತ್ತಿನಲ್ಲಿಲ್ಲದ ಪ್ರತಿ ಪೊಲೀಸ್ ಅಧಿಕಾರಿಯನ್ನು ಎಲ್ಲಾ ಉದ್ದೇಶಗಳಿಗೆ ಸದಾಕಾಲಾ ಕರ್ತವ್ಯದಲ್ಲಿರುವುದಾಗಿಯೇ ಪರಿಗಣಿಸಲಾಗುವುದು. ಆದಕಾರಣ, ಅನಿವಾರ್ಯ ಸಂದರ್ಭಗಳಲ್ಲಿ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳು ನಿಗದಿತ ಸಮಯಕ್ಕಿಂತಲು ಹೆಚ್ಚಿನ ಅವಧಿ ಕಾರ್ಯ ನಿರ್ವಹಿಸುತ್ತಾರೆ. |
| ಆ. | ಸಮಾಜದ ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಯು ದಿನನಿತ್ಯ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವೇತನ ಹಾಗೂ ಇತರೆ ಭತ್ಯೆಯ ವೃಂದವಾರು ಸಂಪೂರ್ಣವಾದ ಮಾಹಿತಿ ನೀಡುವುದು; ಉಳಿದ ಇಲಾಖೆಯಲ್ಲಿನ ಅಧಿಕಾರಿ/ನೌಕರರಿಗೂ ಹಾಗೂ ಈ ಇಲಾಖೆಯಲ್ಲಿನ ಅಧಿಕಾರಿ/ನೌಕರರಿಗೂ ವೇತನ ಹಾಗೂ ಇತರೆ ಭತ್ಯೆಯ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕಿದೆಯೇ; ಹಾಗಿದ್ದಲ್ಲಿ, ಈ ವ್ಯತ್ಯಾಸವನ್ನು ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ಪೊಲೀಸ್ ಇಲಾಖೆಯ ವೃಂದಗಳ ವೇತನ ಶ್ರೇಣಿ ಹಾಗೂ ಇತರೆ ಇಲಾಖೆಗಳ ವೇತನ ಶ್ರೇಣಿಗಳಿಗೆ ತಾರತಮ್ಯ ಇದ್ದ ಕಾರಣ, ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳ ವೇತನ ಶ್ರೇಣಿ ಪರಿಷ್ಕರಣೆಗೆ ದಿನಾಂಕ: 28.06.2016 ರಲ್ಲಿ ಶ್ರೀ ರಾಘವೇಂದ್ರ ಔರಾದ್‌ಕರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ವೇತನ ಶ್ರೇಣಿ ಹಾಗೂ ಭತ್ಯೆ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಮಿತಿಯ ಕೇಲವು ಶಿಫಾರಸ್ಸುಗಳನ್ನು ಒಪ್ಪಿ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗಿದೆ.<br><br>ಅಖಿಲ ಭಾರತ ಸೇವೆಯ ಅಧಿಕಾರಿಗಳನ್ನು ಹೊರತುಪಡಿಸಿ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ವೇತನ ಮತ್ತು ಭತ್ಯೆಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

| | | |
|---|---|---|
| ಇ. | ವಾರ್ಷಿಕ ಆರೋಗ್ಯ ತಪಾಸಣೆಗೆ ಪೊಲೀಸ್ ಇಲಾಖೆಯಲ್ಲಿ ಎಷ್ಟು ಹಣವನ್ನು ನೀಡಲಾಗುತ್ತಿದೆ; ಪೊಲೀಸ್ ಇಲಾಖೆಯಲ್ಲಿ ಪೊಲೀಸರಿಗೆ ಆರೋಗ್ಯ ಭತ್ಯೆ ನೀಡುತ್ತಿರುವ ಮೊತ್ತ ಸಾಕಾಗುತ್ತಿದೆಯೇ: ಈ ಆರೋಗ್ಯ ಭತ್ಯೆಯ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಚಿಂತಿಸಿದೆಯೇ; ಚಿಂತಿಸಿದಲ್ಲಿ, ಯಾವ ಕಾಲಮಿತಿಯೊಳಗೆ ಆರೋಗ್ಯ ಭತ್ಯೆಯ ಮೊತ್ತವನ್ನು ಹೆಚ್ಚಿಸಲಾಗುವುದು. (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 113 ಪಿಪಿಎಸ್ 2025, ದಿನಾಂಕ:03.06.2025 & 18.09.20250 ಪೊಲೀಸ್ ಸಿಬ್ಬಂದಿಗಳ ವಾರ್ಷಿಕ ಆರೋಗ್ಯ ತಪಾಸಣೆಗಾಗಿ ನೀಡಲಾಗುತ್ತಿದ್ದ, ಮೊತ್ತ ರೂ. 1,000/- ಗಳಿಂದ ರೂ.1,500/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಪೊಲೀಸ್ ಸಿಬ್ಬಂದಿಗಳ ವಾರ್ಷಿಕ ಆರೋಗ್ಯ ತಪಾಸಣೆಗಾಗಿ 120 ಘಟಕಗಳಿಗೆ ರೂ.11,99,80,500/- ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ವೇತನ ಆಯೋಗದ ಶಿಫಾರಸ್ಸಿನ ಮೇಲೆ ಆದೇಶ ಸಂಖ್ಯೆ:ಎಫ್‌ಡಿ 21 ಎಸ್‌ಆರ್ ಪಿ 2024(1), ದಿನಾಂಕ: 27.08.2024 ರಲ್ಲಿ ಗ್ರೂಪ್ 'ಸಿ' & 'ಡಿ' ಕೇಡರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ ಲಭ್ಯವಿರುವ ವೈದ್ಯಕೀಯ ಭತ್ಯೆ ದರಗಳನ್ನು ಮಾಸಿಕ ರೂ.200/- ಗಳಿಂದ ರೂ.500/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. |
| ಈ. | ಇಲಾಖೆಯ ಸಿಬ್ಬಂದಿಗಳು ಆರೋಗ್ಯ ಸಮಸ್ಯೆಯಿಂದ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವ ಸಮಯದಲ್ಲಿ ಚಿಕಿತ್ಸೆಯ ಮೊತ್ತವನ್ನು ಸರ್ಕಾರವೇ ಭರಿಸುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ನಡೆಸುಕೊಳ್ಳುವ ರೀತಿ ಭಿನ್ನವಾಗಿದ್ದೂ , ಖಾಸಗಿ ವ್ಯಕ್ತಿಗಳು ಚಿಕಿತ್ಸೆಗೆ ದಾಖಲಾಗುವ ಸಮಯದಲ್ಲಿ ಅವರನ್ನು ನಡೆಸುಕೊಳ್ಳುವ ಹಾಗೆಯೇ ಇಲಾಖೆಯವರನ್ನು ನಡೆಸಿಕೊಳ್ಳುವ ಬಗ್ಗೆ ಸರ್ಕಾರವು ಯಾವಾಗ ಆದೇಶಿಸುವುದು? (ಸಂಪೂರ್ಣವಾದ ಮಾಹಿತಿ ನೀಡುವುದು) | ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಆರೋಗ್ಯ ಸಮಸ್ಯೆಯಿಂದ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವ ಸಮಯದಲ್ಲಿ ಚಿಕಿತ್ಸೆಯ ಮೊತ್ತವನ್ನು ಭರಿಸುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ನಡೆಸಿಕೊಳ್ಳುವ ರೀತಿ ಭಿನ್ನವಾಗಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. |

**ಹೆಚ್‌ಡಿ 348 ಪಿಹೆಚ್‌ಎಸ್ 2025**

**(ಡಾ|| ಜಿ. ಪರಮೇಶ್ವರ)**
ಗೃಹ ಸಚಿವರು

**Details of Special Allowance paid to Officers/Staff as per G.O. No. FD/24/SRP/2018(XI), Dated: 11.01.2019.**

**(Revised rates of Special Allownace Rs per month)**

| Sl No | | UNIT | Amount | SP/ SP (Non IPS) | DySP/ ACP | PI /RPI | PSI / RSI | ASI/ ARSI | CHC/ AHC | CPC /APC | Followers |
|---|---|---|---|---|---|---|---|---|---|---|---|
| 1 | | **Commom categories** | | | | | | | | | |
| | b) | Senior Stenographer | 300 | - | - | - | - | - | - | - | - |
| | c) | Stenographer | 300 | - | - | - | - | - | - | - | - |
| | e) | Typist/Senior Typist | 300 | - | - | - | - | - | - | - | - |
| | g) | Driver/Senior Driver | 300 | - | - | - | - | - | - | - | - |
| | h) | Lift Attender | 200 | - | - | - | - | - | - | - | - |
| | (2) (a) | Personnal Assistant to head of the department | 300 | - | - | - | - | - | - | - | - |
| | (3) (a) | Drivers/Senior Drivers working in the personnel establishment of Heads of the departments and Officers of Equaivalent Rank. | 400[a] | - | - | - | - | - | - | - | - |
| 9 | | **Faculty Members taken on deputation to training Institutions** | | | | | | | | | |
| | d) | All departmental Training Institutes | | | | | | | | | |
| | | Group - A (8000) | | | | | | | | | |
| | | Group - B (6000) | | 8000 | 8000 | 6000 | 4000 | 4000 | 4000 | 4000 | - |
| | | Group -C (4000) | | | | | | | | | |
| 21 | | **Police Department** | | | | | | | | | |
| | (i) | SSB, CID and Finger Print Bureau | - | 600 | 600 | 500 | 400 | - | 300 | 300 | - |
| | (ii) | Police Personnel Working in the District Special Branch | - | - | - | 400 | - | 300 | 300 | 300 | - |
| | (iii) | Police Personnel Working in the Bengaluru City Special Branch | - | - | 600 | 500 | 400 | - | 300 | 300 | - |
| | (iv) | Police Personnel Working in the Criminal Intelligence Bureau | - | - | - | 600 | 500 | - | 300 | 200 | - |
| | (v) | Police Personnel Working in the State Intelligence Machinery (Government Order No: HD/66/EFS/2019, dated: 02.06.2020) | - | 8000 | 7000 | 6000 | 5000 | 4000 | 4000 | 4000 | - |
| | 1 | Stenographer /Reporter | 1250 | - | - | - | - | - | - | - | - |

| Sl No | | UNIT | Initial Grant | Yearly Renewal | Monthly Maitainance |
|---|---|---|---|---|---|
| | | [redacted] | | | |
| | | **Details of Uniform Allowance paid to Officers/Staff as per G.O. No. FD/24/SRP/2018(III), Dated: 11.01.2019.** | | | |
| 1 | | **Police Department** | | | |
| | 1 | SP (Non IPS) | 6000 | 1500 | 500 |
| | 2 | DySP | 6000 | 1500 | 500 |
| | 3 | PI | 5000 | 1500 | 500 |
| | 4 | PSI/ASI/HC/PC | - | - | 500 |
| 12 | | **Others** | | | |
| | 1 | All Senior Driver/ Driver | - | - | 400 |
| | 2 | All Group D and Sanitory Staff | - | - | 400 |